**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರ:1444-2017**

ಸರ್ಕಾರದ ಪರವಾಗಿ
ಕೋಟಾ ಠಾಣಾ ಪೋಲಿಸರು. --- ಪಿರ್ಯಾದಿದಾರರು

-ಮತ್ತು-

ತುಲಸಿದಾಸ ಸಿ. ಗುಣಗಿ, 42 ವರ್ಷ,
ತಂದೆ: ಚಿಪ್ಪ,
ವಾಸ: ಮನೆ ನಂಬ್ರ 1705,
ಕಾಯ್ಕಿಣಿ ರೋಡ್,
ಹಬ್ಬುವಾಡ, ಕಾರವಾರ,
ಉತ್ತರ ಕನ್ನಡ. --- ಆರೋಪಿ

**:ಆಪಾದನೆ:**

**ಶ್ರೀಮತಿ ರೋಹಿಣಿ. ಡಿ. ಬಿ.ಎ., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆಪಾದನೆ ಏನೆಂದರೆ:**

ದಿನಾಂಕ 25.03.2017 ರಂದು ರಾತ್ರಿ 10.30 ಗಂಟೆಗೆ ಉಡುಪಿ ತಾಲೂಕು ತೆಕ್ಕಟ್ಟೆ ಗ್ರಾಮದ ತೆಕ್ಕಟ್ಟೆಯ ಬ್ರಹ್ಮಾಸ್ಥಾನದ ಕಟ್ಟಡದ ಎದುರು ರಾ.ಹೆ. 66 ರಲ್ಲಿ ಉಡುಪಿ ಕಡೆಯಿಂದ ಕುಂದಾಪುರ ಕಡೆಗೆ ಹಾದು ಹೋಗುವ ಪಶ್ಚಿಮದ ತಾರು ರಸ್ತೆಯಲ್ಲಿ ಉಡುಪಿ ಕಡೆಯಿಂದ ಕುಂದಾಪುರ ಕಡೆಗೆ ಆರೋಪಿತರಾದ ನೀವು ನಿಮ್ಮ ಬಾಬ್ತು ಕೆಎ 30 ಎ 0040 ನೇ ನಂಬ್ರದ ಟಾಟಾ ಇಂಡಿಕಾ ಕಾರನ್ನು ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತೀವೇಗ ಹಾಗೂ ನಿರ್ಲಕ್ಷತನದಿಂದ ಚಾಲನೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆಪಾದಿತರಾದ ನೀವು ಈ ಮೇಲೆ ತಿಳಿಸಿದ ನಿಮ್ಮ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿಕೊಂಡು ಬಂದು, ರಸ್ತೆಯ ತೀರಾ ಪಶ್ಚಿಮಕ್ಕೆ ಚಲಾಯಿಸಿ ಪಶ್ಚಿಮದ ಮಣ್ಣು ರಸ್ತೆಯಲ್ಲಿ ರಸ್ತೆ ದಾಟಲು ನಿಂತಿದ್ದ ರಘುರವರಿಗೆ ಡಿಕ್ಕಿ ಹೊಡೆದ ಪರಿಣಾಮ ಅವರಿಗೆ ತಲೆಗೆ, ಕೈ ಕಾಲಿಗೆ ರಕ್ತಗಾಯಗೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದವರನ್ನು ಮಣಿಪಾಲ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಿಸಿ, ಚಿಕಿತ್ಸೆ ಕೊಡಿಸಿ ಬಳಿಕ ದಿ.04.04.2017 ರಂದು ವೈದ್ಯರ ಸಲಹೆಯಂತೆ ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಿ ಮನೆಗೆ ಕರೆದುಕೊಂಡು ಬಂದಿದ್ದು, ಮನೆಯಲ್ಲಿ ಆರೈಕೆಯಲ್ಲಿದ್ದವರು ದಿ. 16.04.2017 ರಂದು ರಾತ್ರಿ 12.30 ಗಂಟೆಗೆ ಗಾಯದ ತೀವ್ರತೆಯಿಂದಲೇ ಮೃತಪಟ್ಟಿದ್ದು, ಆ ಮೂಲಕ ಭಾರತೀಯ ದಂಡ

ಸಂಹಿತೆ ಕಲಂ 304 (ಎ)ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕ : 21.10.2022

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ,**
**ಕುಂದಾಪುರ**

**ಸಿ.ಸಿ. ಸಂಖ್ಯೆ: 1444/ 2017**

**ಫಿರ್ಯಾದುದಾರರು: ಸರ್ಕಾರದ ಪರವಾಗಿ ಕೋಟ ಠಾಣಾ ಪೋಲೀಸರು,**

**- ವಿರುದ್ಧ -**

**ಆರೋಪಿಗಳು** : ತುಲಸಿದಾಸ ಸಿ. ಗುಣಗಿ, ತಂದೆ: ಚಿಪ್ಪ,

1. **ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನಾ ಸಾರಾಂಶವನ್ನು ಅರ್ಥಮಾಡಿಕೊಂಡಿರಾ?**

ಉ.

2. **ಅಪರಾಧವನ್ನು ಒಪ್ಪಿಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ?**

ಉ.

**ಮೇಲ್ಕಂಡ ಆಪಾದನಾ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು,
ಜೆಎಂಎಫ್‌ಸಿ., ಕುಂದಾಪುರ